ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಹೌದು.

ಆ) ಇಲ್ಲ.

ಇ) ಅಂತಹ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಸುಳ್ಯ ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ

೧೦೪. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುಳ್ಯ ತಾಲ್ಲೂಕು ಕೃಷಿ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ೧೯೮೭-೮೮ನೇ ಸಾಲಿನಲ್ಲಿ ಭೂ ಅಭಿವೃದ್ಧಿ ಸಾಲ, ನೀರಾವರಿ ಹಾಗೂ ಪಂಪುಸೆಟ್ಟುಗಳಿಗೆ ಸಾಲ ಪಡೆದ ಪರಿಶಿಷ್ಟ ಜನಾಂಗದವರ ಸಂಖ್ಯೆ ಎಷ್ಟು ಮತ್ತು ಸಾಲದ ಮೊತ್ತ ವೆಷ್ಟು ?

ಶ್ರೀ ಹೆಚ್. ವಿಶ್ವಾಂತಯ್ಯ (ಸಹಕಾರ ಸಚಿವರು).—

ಅ) ಸುಳ್ಯ ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಲ್ಲಿ ೧೯೮೭-೮೮ನೇ ಸಾಲಿನಲ್ಲಿ (೧-೭-೮೭ ರಿಂದ ೩೧-೧೨-೧೯೮೭ರವರೆಗೆ) ೧೮ ಜನ ಪರಿಶಿಷ್ಟ ಜನಾಂಗದ ಸದಸ್ಯರು, ಭೂ ಅಭಿವೃದ್ಧಿ ನೀರಾವರಿ ಮತ್ತು ಪಂಪು ಸೆಟ್ಟು ಯೋಜನೆಗಳಲ್ಲಿ ಸಾಲ ಪಡೆದಿರುತ್ತಾರೆ. ಮತ್ತು ಅವರು ಪಡೆದಿರುವ ಸಾಲದ ಮೊತ್ತ ೬೧, ೦೭೯-೦೦ ರೂ.ಗಳಾಗಿರುತ್ತವೆ.

ಸಹಾಯಕ ಕಮೀಷನರ್‌ಗಳು ಹಾಗೂ ತಹಸೀಲ್ದಾರ್‌ಗಳು

೧೦೫. ಶ್ರೀ ಬಿ. ಗುರುಪ್ರಸಾದ (ನೆಲಮಂಗಲ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ತಹಸೀಲ್ದಾರ, ಸಹಾಯಕ ಕಮೀಷನರಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಆ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಸಂಖ್ಯೆ ಎಷ್ಟು ಹಾಗೂ ಇವರು ಯಾವ ಯಾವ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇ) ಅಧಿಕಾರಿಗಳ ಪೈಕಿ ಕರ್ನಾಟಕ ಸರ್ಕಾರಿ ಸೇವೆ ಬಿರನೇ ನಿಯಮಾವಳಿಯಲ್ಲಿ ಕಡ್ಡಾಯ ನಿವೃತ್ತಿಗೊಳಿಸಿರುವವರ ಸಂಖ್ಯೆ ಎಷ್ಟು ?

ಈ) ಆ ಪೈಕಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಸಂಖ್ಯೆ ಎಷ್ಟು ? (ಹೆಸರು ಕಡ್ಡಾಯ ನಿವೃತ್ತಿ ಗೊಳಿಸಿದ ದಿನಾಂಕ ಮತ್ತು ವಿಳಾಸಗಳ ವಿವರಗಳನ್ನು ನೀಡುವುದು);

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

	ತಹಸೀಲ್ದಾರ್	ಸಹಾಯಕ ಕಮೀಷನರ್
ಅ)	೪೪೧	೫೨
ಆ)	ಪ.ಜಾ. ೬೨	೧೦
	ಪ.ಪಂ. ೧೯	೨
	ಪಟ್ಟಿ ಲಗತ್ತಿಸಿದೆ.	ಪಟ್ಟಿ ಲಗತ್ತಿಸಿದೆ.
ಇ)	ಇಲ್ಲ.	
ಈ)	ಪ್ರಶ್ನೆ (ಇ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.	